ಓ:ಎಸ್:ನಂ.*16/2016*

ಪಿ.ಡಬ್ಲ್ಯೂ- *2*

**ದಿನಾಂಕ: *31-05-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ ಎನ್ ಸಿ ವಕೀಲರಿಂದ**

ನಮ್ಮ ತಂದೆಯವರು ತೀರಿ ಹೋಗಿ *10* ವರ್ಷಗಳಾಯಿತು ಎಂದರೆ ಸರಿ. ದಿನಾಂಕ: *16-07-1984* ರಲ್ಲಿ ನಮ್ಮ ತಂದೆಯವರು ದಾವ ಸ್ವತ್ತನ್ನು ಖರೀದಿ ಮಾಡಿರುತ್ತಾರೆಂದರೆ ಸರಿ. ನನಗೆ ಈಗ *41* ವರ್ಷ ವಯಸ್ಸಾಗಿದೆ. ನನ್ನ ತಂದೆಯವರು ದಾವ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ನನಗೆ *2* ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಪಾಳೆಗಾರರ ಕ್ಯಾಂಪ್ ಮತ್ತು ಗಾಳಿಹಳ್ಳಿ ಕ್ರಾಸ್ ಎರಡು ನನಗೆ ತಿಳಿದಿರುತ್ತದೆ. ಪಾಳೆಗಾರರ ಕ್ಯಾಂಪ್ ಮತ್ತು ಗಾಳಿಹಳ್ಳಿ ಕ್ರಾಸ್ ಎರಡೂ ಬೇರೆ ಬೇರೆ ಬಡಾವಣೆಗಳು ಎಂದರೆ ಸರಿ. ನನ್ನ ತಂದೆಯವರು ದಾವ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ನಾನು *2* ವರ್ಷದ ಹುಡುಗನಾಗಿದ್ದು, ದಾವ ಆಸ್ತಿಯ ಬಗ್ಗೆ ನನಗೆ ಅಷ್ಟೊಂದು ತಿಳಿದಿಲ್ಲ ಎಂದು ನುಡಿಯುತ್ತಾರೆ. ದಾವ ಷೆಡ್ಯೂಲ್ ಸ್ವತ್ತಿನಲ್ಲಿ ಒಂದು ಹೆಂಚಿನ ಮನೆ ಇದ್ದು, ಅದನ್ನು ಅಲ್ಲಿಂದ ಕೆಡವಲು ಯಾವುದೇ ಪರವಾನಗಿ ಪಡೆದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವ ಷೆಡ್ಯೂಲ್ ಸ್ವತ್ತು ಪಾಳೆಗಾರರ ಕ್ಯಾಂಪಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ಪಾಳೆಗಾರರ ಕ್ಯಾಂಪಿನಲ್ಲಿ ಇದೆ ಎಂದು ನುಡಿದಿರುತ್ತಾರೆ. ಪಾಳೆಗಾರರ ಕ್ಯಾಂಪಿನಲ್ಲಿರುವ ಅಕ್ಕಪಕ್ಕದ ಮನೆಯ ಅಸಸ್ ಮೆಂಟ್ ನಂಬರ್ ನಿಮಗೆ ತಿಳಿದಿದೆಯೇ ಎಂದರೆ ಸಾಕ್ಷಿಯು ಅಲ್ಲಿಯಾರು ವಾಸ ಮಾಡುತ್ತಾರೆಂದು ಹೇಳಬಲ್ಲೆ ಆದರೆ ಅಸಸ್ ಮೆಂಟ್ ನಂಬರ್ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವ ಆಸ್ತಿಯ ಅಸಸ್ ಮೆಂಟ್ ನಂಬರ್ ಗಾಳಿಹಳ್ಳಿ ಕ್ರಾಸನಲ್ಲಿ ಬರುತ್ತದೆ, ಪಾಳೆಗಾರರ ಕ್ಯಾಂಪಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ದಾವ ಹಾಕಿರುವ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿ. ಪ್ರತಿವಾದಿಯವರು ಹೂಡಿದ ದಾವೆಯ ಷೆಡ್ಯೂಲ್ ಆಸ್ತಿಯ ಚೆಕ್ಕುಬಂದಿ ಮತ್ತು ಅಸಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ದಾವ ಆಸ್ತಿಯ ಚೆಕ್ಕುಬಂದಿ ನನಗೆ ತಿಳಿದಿದೆ. ನಿಮ್ಮ ದಾವ ಆಸ್ತಿಯು ಪಾಳೆಗಾರರ ಕ್ಯಾಂಪಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ಅಲ್ಲಿಯೇ ಇದೆ ಎಂದು ನುಡಿದಿರುತ್ತಾರೆ. ಹಂಚಿನ ಮನೆಯನ್ನು ಕೆಡವಿಲ್ಲ ಎಂದರೆ ಸಾಕ್ಷಿಯು ಕೆಡವಿದ್ದೇವೆ ಎಂದು ನುಡಿಯುತ್ತಾರೆ. ನೀವು ವಾದಿಯ ಪರವಾಗಿ ಅನುಕೂಲವಾಗಲಿ ಎಂದು ಅವರ ಜೊತೆ ಶರೀಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

***ಓ. ಕೇ. ಸ. ಇ. ಎ. ಒ.***

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***